

# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 58 | Pages. 2 | Date: 30-01-2026, FRIDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 58 - ಪುಟಗಳು : 2 | 30-01-2026 | ಶುಕ್ರವಾರ | Ph: 8762954248 | ದರ : ₹1


## ಮನೆಗೆಲಸದ ಮಹಿಳೆ ಜತೆ ಅಕ್ರಮ ಸಂಬಂಧಕ್ಕೆ ಪೈಪೋಟಿ

# ಅವಳ ಹೊಸ ಗೆಳೆಯನನ್ನು ಕೊಂದವನು ಹಳೇ ಪ್ರೇಮಿ!

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಕೆ.ಆರ್.ಪುರಂನ 7ನೇ ಅಡ್ಡ ರಸ್ತೆಯಲ್ಲಿ ಗುರುವಾರ ಬೆಳಿಗ್ಗೆ ವ್ಯಕ್ತಿಯೊಬ್ಬನ ಬರ್ಬರ ಹತ್ಯೆ ನಡೆದಿದ್ದು, ಮಹಿಳೆಯೊಂದಿಗಿನ ಅಕ್ರಮ ಸಂಬಂಧ ವಿಚಾರವಾಗಿ ಇಬ್ಬರು ವ್ಯಕ್ತಿಗಳ ನಡುವೆ ನಡೆದ ಗಲಾಟೆ ಇದಾಗಿದೆ.

ಕುವೆಂಪು ನಗರದ ಡಿ.ಎಸ್.ಆನಂದ್ (47) ಮೃತ. ನಗರದ ಧರ್ಮೇಂದ್ರ ಕೊಲೆ ಆರೋಪಿಯಾಗಿದ್ದು ತಲೆ ಮರೆಸಿಕೊಂಡಿದ್ದಾನೆ.

ಬೆಂಗಳೂರಿನಲ್ಲಿ ಕೇಟರಿಂಗ್ ಕೆಲಸ ಮಾಡಿಕೊಂಡಿದ್ದ ಆನಂದ್ ಹೆಂಡತಿ ಜೊತೆಗೆ ಜಗಳವಾಡಿ ಹಾಸನಕ್ಕೆ ಬಂದು ತಮ್ಮ ಸಹೋದರ ಹಾಗೂ ತಾಯಿ ಜೊತೆಗೆ ವಾಸವಿದ್ದ. ನಗರ ಹೊರವಲಯದ ರೆಸಾರ್ಟ್‌ನಲ್ಲಿ ವ್ಯವಸ್ಥಾಪಕ ಹಾಗೂ ಕೇಟರಿಂಗ್ ಕೆಲಸ ಮಾಡಿಕೊಂಡಿದ್ದ. ಆದರೆ ವರ್ಷದ ಹಿಂದೆ ಮಹಿಳೆಯೊಂದಿಗೆ ಉಂಟಾದ ಪ್ರೇಮ ಸಲುಗೆ ಪ್ರಾಣಕ್ಕೆ ಕುತ್ತು ತಂದಿದೆ.

ಅಡ್ಲಿಮನೆಯ ಧರ್ಮೇಂದ್ರ ಹಾಗೂ ಡಿ.ಎಸ್.ಆನಂದ್ ಸುಮಾ ಎಂಬಾಕೆಯೊಂದಿಗೆ ಅಕ್ರಮ ಸಂಬಂಧ ಹೊಂದಿದ್ದರು. ಸುಮಾ ಮನೆಗೆಲಸ ಮಾಡಿಕೊಂಡು ಬಾಡಿಗೆ ಮನೆಯಲ್ಲಿ ವಾಸವಿದ್ದಳು. ಕಳೆದ ಆರು ವರ್ಷಗಳಿಂದ ಧರ್ಮೇಂದ್ರನ ಜೊತೆಗೆ ಅಕ್ರಮ ಸಂಬಂಧ ಹೊಂದಿದ್ದಳು ಎನ್ನಲಾಗಿದೆ.

ಒಂದು ವರ್ಷದಿಂದ ಡಿ.ಎಸ್.ಆನಂದ್ ಅವರ ಮನೆ ಕೆಲಸಕ್ಕೆ ಸೇರಿಕೊಂಡ ಆಕೆ ಅವರೊಂದಿಗೆ ಸಲುಗೆ ಬೆಳೆಸಿ ಅಕ್ರಮ ಸಂಬಂಧ ಮುಂದುವರಿಸಿದ್ದಳು. ಈ ವಿಚಾರ ಧರ್ಮೇಂದ್ರನಿಗೆ ಗೊತ್ತಾಗಿ ಆನಂದ್ ಮೇಲೆ ದ್ವೇಷ ಸಾಧಿಸುತ್ತಿದ್ದ ಎಂದು ತಿಳಿದುಬಂದಿದೆ.

### ಕಂಠಪೂರ್ತಿ ಕುಡಿದಿದ್ದರು

ಹೀಗೆ ಬಿಟ್ಟರೆ ಸುಮಾ ತನ್ನ ಬಿಟ್ಟು ಆನಂದ್ ಜೊತೆಗೆ ಹೋಗುತ್ತಾಳೆಂದು ಭಾವಿಸಿದ ಧರ್ಮೇಂದ್ರ, ಇಬ್ಬರ ಸಂಪರ್ಕ ಕಡಿತಗೊಳಿಸಲು ಸಾಕಷ್ಟು ಪ್ರಯತ್ನಿಸಿದರೂ ಸಫಲವಾಗಿರಲಿಲ್ಲ. ಅದರಿಂದ ಬೇರೆ ಉಪಾಯ ಮಾಡಿದ ಆತ ಆನಂದ್‌ನ ಸ್ನೇಹ ಬೆಳೆಸಿ ಆತನ ವಿಶ್ವಾಸ ಗಳಿಸಿದ್ದ. ಬುಧವಾರ ಮಧ್ಯಾಹ್ನ ಇಬ್ಬರೂ ಬಾರ್‌ವೊಂದರಲ್ಲಿ ಕಂಠಪೂರ್ತಿ ಕುಡಿದು ಮಾತನಾಡುತ್ತಿದ್ದಾಗ ಧರ್ಮೇಂದ್ರನು ಸುಮಾಳ ವಿಚಾರ ಪ್ರಸ್ತಾಪಿಸಿ ಆಕೆಯ ಸಹವಾಸ ಬಿಟ್ಟು ಬಿಡು ಎಂದು ಎಚ್ಚರಿಕೆ ನೀಡಿದ್ದ. ಆಗ ಇಬ್ಬರ ನಡುವೆ ಪರಸ್ಪರ ಗಲಾಟೆ ನಡೆದು ನಂತರ ತಮ್ಮ ತಮ್ಮ ಮನೆಗೆ ತೆರಳಿದ್ದರು.

ಮಧ್ಯರಾತ್ರಿ 1.40ರ ಸಮಯದಲ್ಲಿ ಧರ್ಮೇಂದ್ರ, ಆನಂದ್‌ಗೆ ಕರೆ ಮಾಡಿದ್ದಾನೆ. ಕರೆ ಸ್ವೀಕರಿಸಿದ್ದ ಆನಂದ್, ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾ ಎಲ್ಲಿದ್ದೀಯ ಹೇಳು ಅಲ್ಲಿಗೆ ಬರುತ್ತೇನೆಂದು ಹೇಳಿದ್ದಾರೆ. ಧರ್ಮೇಂದ್ರ ಸುಮಾ ಮನೆ ಸಮೀಪ ಬಾ ಎಂದಾಗ ಆನಂದ್ ಬೈಕ್ ಏರಿ ಅಲ್ಲಿಗೆ ಹೋಗಿದ್ದಾನೆ.



### ಸಾವಿನ ವಿಷಯ ತಿಳಿಸಿದ್ದು ಸುಮಾ

ಮಧ್ಯರಾತ್ರಿ ಆನಂದ್ ಮೃತಪಟ್ಟಿರುವ ವಿಚಾರವನ್ನು ಆತನ ತಾಯಿಗೆ ಕರೆ ಮಾಡಿ ತಿಳಿಸಿದ್ದೇ ಸುಮಾ. ತಕ್ಷಣವೇ ಹಿಮ್ಸ್ ಆಸ್ಪತ್ರೆಗೆ ಬನ್ನಿರಿ ಎಂದು ಆಕೆಯೇ ಮಾಹಿತಿ ನೀಡಿದ್ದಾಳೆ. ಘಟನಾ ಸ್ಥಳದಲ್ಲಿ ಸುಮಾ ಇದ್ದುದರಿಂದ ಪೊಲೀಸರು ಆಕೆಯನ್ನು ಪ್ರಮುಖ ಸಾಕ್ಷಿಯಾಗಿ ಪರಿಗಣಿಸಿ ವಿಚಾರಣೆ ನಡೆಸುತ್ತಿದ್ದಾರೆ.

ಈ ಕುರಿತು ಮಾಹಿತಿ ನೀಡಿದ ಶುಭಾನ್ವಿತಾ ಅವರು, ಹತ್ಯೆಗೀಡಾದ ಆನಂದ್ ಅವರ ದೇಹದ ಮೂರು ಕಡೆಗಳಲ್ಲಿ ಆರೋಪಿ ಚಾಕುವಿನಿಂದ ಇರಿದಿದ್ದಾನೆ. ಅದಾದ ಬಳಿಕ ಎಸ್ಕೇಪ್ ಆಗಿದ್ದಾನೆ. ಕೊಲೆಗೆ ಬಳಸಿದ್ದ ಆಯುಧ ಸಿಕ್ಕಿದೆ. ಸಿಸಿಟಿವಿ ದೃಶ್ಯಾವಳಿ ಸಂಗ್ರಹಿಸಲಾಗಿದೆ. ಅದಕ್ಕೆ ಪೂರಕವಾಗಿ ಪ್ರತ್ಯಕ್ಷದರ್ಶಿ ಸಿಕ್ಕಿದ್ದು, ಹೇಳಿಕೆ ಪಡೆಯಲಾಗುತ್ತಿದೆಯೆಂದರು.

### ಪ್ರತ್ಯೇಕ ಪ್ರಕರಣದಲ್ಲಿ ನಾಲ್ವರ ಬಂಧನ



ತಾಲ್ಲೂಕಿನ ಅದ್ದಿಹಳ್ಳಿಯಲ್ಲಿ ರಂಜಿತಾ (25) ಆತ್ಮಹತ್ಯೆ ಸಂಬಂಧ ಶಾಂತಿಗ್ರಾಮ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತಾ ಹೇಳಿದರು.

ಸುದ್ದಿಗಾರರೊಂದಿಗೆ ಗುರುವಾರ ಮಾತನಾಡಿ, ವರದಕ್ಷಿಣೆ ಕಿರುಕುಳದಿಂದ ತಮ್ಮ ಮಗಳು ಸಾವಿಗೀಡಾಗಿದ್ದಾಳೆಂದು ಪೋಷಕರು ದೂರು ದಾಖಲಿಸಿದ್ದರು. ಆ ಹಿನ್ನೆಲೆಯಲ್ಲಿ ರಂಜಿತಾ ಪತಿ ಚೇತನ್ ಅವರ ಅಣ್ಣ ಹಾಗೂ ತಂದೆಯನ್ನು ವಶಕ್ಕೆ ಪಡೆಯಲಾಗಿದೆಯೆಂದರು.

ಮತ್ತೊಂದು ಪ್ರಕರಣಕ್ಕೆ ಸಂಬಂಧಿಸಿ ಸಾಲಗಾರರ ಕಿರುಕುಳದಿಂದ ಬೇಸತ್ತು ಕೃಷ್ಣಪ್ಪ ಎಂಬುವವರ ಆತ್ಮಹತ್ಯೆ ಸಂಬಂಧ ನೆಲಮಂಗಲದ ಮಂಜು ಹಾಗು ರಮೇಶ್ ಎಂಬುವವರನ್ನೂ ಬಂಧಿಸಲಾಗಿದೆ ಎಂದರು.



ಕೆ.ಆರ್.ಪುರಂನ 7ನೇ ಅಡ್ಡ ರಸ್ತೆಯ ಮಟನ್ ಅಂಗಡಿ ಮುಂಭಾಗವೇ ಗಲಾಟೆ ನಡೆದಿದ್ದು ಧರ್ಮೇಂದ್ರ, ಚಾಕುವಿನಿಂದ ಹೊಟ್ಟೆ ಹಾಗು ಎದೆ ಭಾಗಕ್ಕೆ ಮೂರು ಬಾರಿ ಇರಿದು ಕೊಲೆಗೈದಿದ್ದಾನೆ. ಆನಂದ್ ಉಸಿರು ಚೆಲ್ಲುತ್ತಿದ್ದಂತೆ ಸ್ಥಳದಿಂದ ಕಾಲ್ಕಿತ್ತಿದ್ದಾನೆ.

## ಸಕಲೇಶಪುರದಲ್ಲಿ ತಾಯಿ-ಮಕ್ಕಳ ಆಸ್ಪತ್ರೆಗೆ ಶಾಸಕರ ಬೇಡಿಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



**ಸಕಲೇಶಪುರ:** ಸಕಲೇಶಪುರಕ್ಕೆ ತಾಯಿ-ಮಕ್ಕಳ ಆಸ್ಪತ್ರೆ ಮಂಜೂರು ಮಾಡಬೇಕೆಂದು ಶಾಸಕ ಸಿಮೆಂಟ್ ಮಂಜು ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ವಿಧಾನಸಭೆ ವಿಶೇಷ ಅಧಿವೇಶನದಲ್ಲಿ ಮಾತನಾಡಿದ ಅವರು, ಮಲೆನಾಡು ಪ್ರದೇಶ ಸಕಲೇಶಪುರದಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಅವಶ್ಯಕತೆ ಹೆಚ್ಚಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಮೂಲಸೌಕರ್ಯ ಹಾಗೂ ವೈದ್ಯಕೀಯ ಸಿಬ್ಬಂದಿ ಕೊರತೆ ಹೆಚ್ಚಿದೆ. ಈ ಎಲ್ಲಾ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕೆಂದು ಶಾಸಕ ಸಿಮೆಂಟ್ ಮಂಜು ನಿವೇದನೆ ಮಾಡಿಕೊಂಡರು.

ಸುಮಾರು 75 ವರ್ಷಗಳ ಇತಿಹಾಸ ಹೊಂದಿರುವ ಸಕಲೇಶಪುರ ಆಸ್ಪತ್ರೆ ಇಂದಿಗೂ ಹಳೆಯ ಕಟ್ಟಡದಲ್ಲೇ ಕಾರ್ಯನಿರ್ವಹಿಸುತ್ತಿದೆ. ಮಲೆನಾಡು ಪ್ರದೇಶದಲ್ಲಿ ಅಧಿಕ ಮಳೆ, ಕಾಫಿ ತೋಟ ಕಾರ್ಮಿಕರ ಹೆಚ್ಚಳ ಹಾಗೂ ಸಿಬ್ಬಂದಿ ಕೊರತೆಯಿಂದ ದೂರದ ಹಳ್ಳಿಗಳಿಂದ ಹಾಸನಕ್ಕೆ ತೆರಳುವ ಅನಿವಾರ್ಯತೆ ಇರುವುದರಿಂದ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕು ಎಂದರು. ತಾಲ್ಲೂಕು ಕೇಂದ್ರವಾಗಿರುವ ಸಕಲೇಶಪುರದಲ್ಲಿ ಒಂದು ಲಕ್ಷಕ್ಕೂ ಅಧಿಕ ಜನಸಂಖ್ಯೆ ಇದ್ದು, ಹೆರಿಗೆ ಪ್ರಮಾಣ ಹೆಚ್ಚಿದೆ. 150 ಹಾಸಿಗೆಗಳ ಆಸ್ಪತ್ರೆಯಿದ್ದರೂ ಸ್ತ್ರೀ ರೋಗ ತಜ್ಞರಿಲ್ಲ. ಹೀಗಾಗಿ ಸಾರ್ವಜನಿಕರು ಖಾಸಗಿ ಆಸ್ಪತ್ರೆಗಳ ಮೊರೆ ಹೋಗುತ್ತಿದ್ದಾರೆ ಎಂದರು. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, ತಾಲ್ಲೂಕು ಆಸ್ಪತ್ರೆಯಲ್ಲಿ ಹಾಸಿಗೆ ಬಳಕೆ ಪ್ರಮಾಣ ಕೇವಲ ಶೇ. 20ರಷ್ಟು ಮಾತ್ರವಿದ್ದು, ತಾಯಿ-ಮಕ್ಕಳ ಆಸ್ಪತ್ರೆ ಆರಂಭಕ್ಕೆ ಅಗತ್ಯವಿರುವ ಶೇ. 70ರಷ್ಟು ಹಾಸಿಗೆ ಬಳಕೆ ಮಾನದಂಡ ಪೂರೈಸಿಲ್ಲ ಎಂದರು. ಹಾಸಿಗೆ ಬಳಕೆ ಶೇ. 20 ರಷ್ಟು ಇರುವುದರಿಂದ ಕಲ್ಪಿಸಿರುವ ಅವಕಾಶ ಸದ್ಬಳಕೆಯಾಗುತ್ತಿಲ್ಲ ಎಂಬಂತಾಗುತ್ತದೆ. ಜನರು ಅಧಿಕ ಪ್ರಮಾಣದಲ್ಲಿ ಬಾರದೆ ಇರುವುದಕ್ಕೆ ಅಲ್ಲಿ ಮೂಲಸೌಕರ್ಯ ಇಲ್ಲದಿರುವುದೇ ಕಾರಣವಾಗಿದೆ. ಆದ್ದರಿಂದ ಎಲ್ಲಾ ತಾಲ್ಲೂಕು ಆಸ್ಪತ್ರೆಗಳಿಗೆ ಹೆಚ್ಚುವರಿ ಸ್ತ್ರೀ ರೋಗ, ಮಕ್ಕಳ ತಜ್ಞರು, ಅನೆಸ್ತೇಷಿಯಾ ತಜ್ಞರನ್ನು ನಿಯೋಜಿಸಿ ದಿನದ 24 ಗಂಟೆ ಸೇವೆ ಒದಗಿಸಲಾಗುವುದು. ಈ ನಿಟ್ಟಿನಲ್ಲಿ ಒಂದು ವಾರದಲ್ಲಿ ಅಧಿಸೂಚನೆ ಪ್ರಕಟವಾಗಲಿದೆಯೆಂದರು. ಸಿಬ್ಬಂದಿ ಕೊರತೆ ನಿವಾರಣೆಯಾದ ನಂತರ ಹಾಸಿಗೆ ಬಳಕೆ ಪ್ರಮಾಣ ಹೆಚ್ಚಿದರೆ ಮುಂದಿನ ಹಂತದಲ್ಲಿ ಎಂಸಿಹೆಚ್ ಆಸ್ಪತ್ರೆ ಸ್ಥಾಪನೆ ಪರಿಗಣಿಸಲಾಗುವುದು. ಸಕಲೇಶಪುರ ತಾಲೂಕಿನ ವಿವಿಧ ಹೋಬಳಿಗಳಿಗೆ ಸಮುದಾಯ ಆರೋಗ್ಯ ಕೇಂದ್ರ ಸ್ಥಾಪನೆ ಪ್ರಸ್ತಾವನೆ ಪರಿಗಣನೆಯಲ್ಲಿದ್ದು, ಮುಂದಿನ ಆರ್ಥಿಕ ವರ್ಷದಲ್ಲಿ ಈ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದೆಂದು ಭರವಸೆ ನೀಡಿದರು.

## ಹೆದ್ದಾರಿಯಲ್ಲಿ ವಾಹನ ಚಾಲಕರ ಆರೋಗ್ಯ ತಪಾಸಣೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ಕಿರೀಸಾವೆ ಗಡಿಯಲ್ಲಿ ದೇವಿಹಳ್ಳಿ-ಹಾಸನ ಟೋಲ್ ವೇ ಪ್ರೈವೇಟ್ ಲಿಮಿಟೆಡ್ ವತಿಯಿಂದ ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಲಾರಿ ಸೇರಿ ಭಾರೀ ಸರಕು ಸಾಗಣೆ ವಾಹನಗಳ 300 ಚಾಲಕರಿಗೆ ಆರೋಗ್ಯ ಮತ್ತು ನೇತ್ರ ತಪಾಸಣೆ ಗುರುವಾರ ನಡೆಯಿತು.

ಡಾ. ಅನಿತಾ ಅವರ ನೇತೃತ್ವದಲ್ಲಿ ಚಾಲಕರಿಗೆ ಮಧುಮೇಹ, ರಕ್ತದೊತ್ತಡ ಮತ್ತು ನೇತ್ರ ಪರೀಕ್ಷೆ ಮಾಡಿ, ಅಗತ್ಯ ಇರುವವರಿಗೆ ಸೂಕ್ತ ಸಲಹೆ, ಔಷಧಿಗಳನ್ನು ನೀಡಲಾಯಿತು. ನೇತ್ರ ಪರೀಕ್ಷೆಯಲ್ಲಿ ದೋಷ ಇದ್ದ ಕೆಲವು ಚಾಲಕರಿಗೆ ಕನ್ನಡಕಗಳನ್ನು ನೀಡಲಾಗಿದೆ. ಕೆಲವರಿಗೆ ಕನ್ನಡಕವನ್ನು ಅವರ ವಿಳಾಸಕ್ಕೆ ಕಳಿಸಲಾಗುವುದೆಂದು ಸಿಬ್ಬಂದಿ ಸೋಮಶೇಖರ್ ತಿಳಿಸಿದರು.

ಎನ್‌ಹೆಚ್‌ಐನ ಯೋಜನಾ ನಿರ್ದೇಶಕ ಸೈಯದ್ ಅಮಾನುಲ್ಲಾ, ವ್ಯವಸ್ಥಾಪಕ ವಿಪಿನ್ ಶರ್ಮಾ, ದೇವಿಹಳ್ಳಿ-ಹಾಸನ ಟೋಲ್ ವೇ ಪ್ರೈವೇಟ್ ಲಿಮಿಟೆಡ್ ಯೋಜನೆ ಮುಖ್ಯಸ್ಥ ಸಿ.ಕೆ.ಸುನಿಲ್ ಭಾಗವಹಿಸಿದ್ದರು.

## ಮ್ಯಾಗ್ನೆಟ್ ಶಾಲೆ ಹೆಸರಲ್ಲಿ ಬಡ ಮಕ್ಕಳಿಗೆ ಅನ್ಯಾಯ



ಹಾಸನ: ಮ್ಯಾಗ್ನೆಟ್ ಶಾಲೆ ಹೆಸರಿನಲ್ಲಿ ರಾಜ್ಯ ಸರ್ಕಾರ ಗ್ರಾಮೀಣ ಭಾಗದಲ್ಲಿ ಸರ್ಕಾರಿ ಶಾಲೆಗಳ ಅಸ್ತಿತ್ವವನ್ನೇ ನಾಶ ಪಡಿಸುತ್ತಿದೆ. ದಾಖಲಾತಿ ಕೊರತೆ ಹೆಸರಿನಲ್ಲಿ ಶಾಲೆಗಳ ವಿಲೀನ ಮಾಡುತ್ತಿರುವುದು ಅವೈಜ್ಞಾನಿಕ ನಿರ್ಧಾರ ಎಂದು ವಿಶ್ರಾಂತ ಪ್ರಾಧ್ಯಾಪಕ ರಾಜಪ್ಪ ದಳವಾಯಿ ಹೇಳಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಸಾಹಿತಿ ಡಾ.ಆರ್. ಓಬಳೇಶ ಘಟ್ಟಿ ಅವರ ನಾಲ್ಕು ಕೃತಿಗಳ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿ, ಯಾವುದೇ ದೇಶ ಅಭಿವೃದ್ಧಿಯಾಗಬೇಕಾದರೆ ಶಿಕ್ಷಣವೇ ಮೊದಲ ಅಸ್ತ್ರ. ಅದರಲ್ಲೂ ಹೆಣ್ಣು ಮಕ್ಕಳಿಗೆ ಸಮರ್ಪಕ ಶಿಕ್ಷಣ ನೀಡುವುದು ಸಮಾಜದ ಪ್ರಗತಿಗೆ ಅನಿವಾರ್ಯ. ಹೆಣ್ಣು ಮಕ್ಕಳನ್ನು ಮನೆ ಕೆಲಸಕ್ಕೆ ಸೀಮಿತಗೊಳಿಸದೆ ಶಿಕ್ಷಣ ಕೊಡಿಸಬೇಕು. ಮದುವೆಯಾದ ಬಳಿಕ ಯುವತಿಯರಿಗೆ ಓದಲು ಅವಕಾಶ ಸಿಗುವುದಿಲ್ಲ ಎಂಬ ವಾಸ್ತವವನ್ನು ಅರಿತು ವ್ಯಾಸಂಗಕ್ಕೆ ಪ್ರೋತ್ಸಾಹಿಸಬೇಕೆಂದು ಸಲಹೆ ನೀಡಿದರು.


## ಗ್ರಾಮ ಅಭಿವೃದ್ಧಿಯಲ್ಲಿ ಪಿಡಿಓಗಳ ಪಾತ್ರ ಹೆಚ್ಚು: ಸಿಮೆಂಟ್ ಮಂಜು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಜನಸಾಮಾನ್ಯರ ಸಮಸ್ಯೆಗಳಿಗೆ ತ್ವರಿತ ಸ್ಪಂದನೆ ಮೂಲಕ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು. ಆ ಮೂಲಕ ಗ್ರಾಮ ಅಭಿವೃದ್ಧಿಗೆ ಸಹಕರಿಸಬೇಕೆಂದು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಶಾಸಕ ಸಿಮೆಂಟ್ ಮಂಜು ಸಲಹೆ ನೀಡಿದರು.

ತಾಲ್ಲೂಕಿನ ಬಾಳ್ಳುಪೇಟೆ ಗ್ರಾಮ ಪಂಚಾಯಿತಿಯ ನೂತನ ಕಟ್ಟಡ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಪಂಚಾಯಿತಿಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸಿ, ಕಾಲಮಿತಿಯೊಳಗೆ ಜನರ ಕೆಲಸಗಳನ್ನು ಪೂರ್ಣಗೊಳಿಸಬೇಕು ಎಂದು ಸೂಚಿಸಿದರು.

ವಿನಾಕಾರಣ ಸಾರ್ವಜನಿಕರನ್ನು ಕಚೇರಿಗಳಿಗೆ ಅಲೆದಾಡಿಸದೆ, ಕನಿಷ್ಠ ಮೂಲ ಸೌಕರ್ಯ ಒದಗಿಸಬೇಕು. ಬಾಳ್ಳುಪೇಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಈಗಾಗಲೇ ಕೈಗೆತ್ತಿಕೊಳ್ಳಲಾಗಿದೆ.



ಹಳೆ ರಾಷ್ಟ್ರೀಯ ಹೆದ್ದಾರಿಯ ಮರು ಡಾಂಬರೀಕರಣ ಕಾರ್ಯ ಪೂರ್ಣಗೊಂಡಿದ್ದು, ಹಲವು ವರ್ಷಗಳಿಂದ ಗುಂಡಿ ಬಿದ್ದಿದ್ದ ಹಸುಗವಳ್ಳಿಗೆ ನೂತನ ಕಾಂಕ್ರೀಟ್ ರಸ್ತೆ ನಿರ್ಮಿಸಲಾಗಿದೆ ಎಂದು ವಿವರಿಸಿದರು.

ಬಾಳ್ಳುಪೇಟೆ-ಜಮ್ಮನಹಳ್ಳಿ ರಾಜ್ಯ ಹೆದ್ದಾರಿ 112ನ್ನು 10 ಕೋಟಿ ರೂ. ವೆಚ್ಚದಲ್ಲಿ ಮೂರು ಕಿಲೋ ಮೀಟರ್ ಉದ್ದದ ನೂತನ ರಸ್ತೆಯಾಗಿ ನಿರ್ಮಿಸಲಾಗುತ್ತಿದೆ. ಅಭಿವೃದ್ಧಿ ವಿಚಾರದಲ್ಲಿ ಯಾವುದೇ ರಾಜಕೀಯ ಮಾಡುವುದಿಲ್ಲ.

ಸಾರ್ವಜನಿಕರು ಅಥವಾ ಜನಪ್ರತಿನಿಧಿಗಳು ಯಾರೇ ಸಮಸ್ಯೆಗಳನ್ನು ತಮ್ಮ ಗಮನಕ್ಕೆ ತಂದರೂ ಅವುಗಳನ್ನು ಪ್ರಾಮಾಣಿಕವಾಗಿ ಬಗೆಹರಿಸುವುದೇ ನನ್ನ ಉದ್ದೇಶ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಕುಡಿಯುವ ನೀರು, ರಸ್ತೆ ಹಾಗೂ ವಿದ್ಯುತ್ ಸೇರಿದಂತೆ ಮೂಲಭೂತ ಸೌಕರ್ಯಗಳ ಒದಗಿಸುವುದೇ ತಮ್ಮ ಮೊದಲ ಆದ್ಯತೆಯಾಗಿದ್ದು, ಸರ್ಕಾರದಿಂದ ಅಗತ್ಯ ಅನುದಾನ ಲಭ್ಯವಾಗುವಂತೆ ಅಭಿವೃದ್ಧಿ ಕಾರ್ಯಗಳನ್ನು ಹಂತ ಹಂತವಾಗಿ ಕೈಗೆತ್ತಿಕೊಳ್ಳಲಾಗಿದೆ ಎಂದು ಅವರು ತಿಳಿಸಿದರು.

ಕ್ಷೇತ್ರದಲ್ಲಿ ಈಗಾಗಲೇ ನೂರಾರು ಜನರಿಗೆ ಹಕ್ಕುಪತ್ರಗಳನ್ನು ವಿತರಿಸಲಾಗಿದ್ದು, ಮುಂದಿನ ದಿನಗಳಲ್ಲಿ ಇನ್ನೂ ಸಾವಿರಾರು ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸುವ ಗುರಿ ಹೊಂದಲಾಗಿದೆ. ಈ ಸಂಬಂಧ ಕಂದಾಯ ಸಚಿವರೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇನೆ ಎಂದು ಹೇಳಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ಲತಾ, ಉಪಾಧ್ಯಕ್ಷ ಎಚ್.ಎಂ.ಸ್ವಾಮಿ, ಜಮ್ಮನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಬಿ.ಬಿ.ಲೋಕೇಶ್, ಹೋರಾಟಗಾರ ಬಿ.ಜೆ. ಗೋಪಾಲ್ ಹಾಗೂ ಇತರರಿದ್ದರು.

## ವಿದ್ಯಾರ್ಥಿಗಳು ನಾಯಕತ್ವ ಗುಣ ಬೆಳೆಸಿಕೊಳ್ಳಬೇಕು




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವಿದ್ಯಾರ್ಥಿಗಳು ನಾಯಕತ್ವ ಗುಣ ಬೆಳೆಸಿಕೊಂಡರೆ ಉತ್ತಮ ಭವಿಷ್ಯ ರೂಪಿಸಿಕೊಳ್ಳಬಹುದು ಎಂದು ರೋಟರಿ ಸಂಪನ್ಮೂಲ ವ್ಯಕ್ತಿ ನಿರ್ಮಲ್ ಕುಮಾರ್ ಹೇಳಿದರು.

ನಗರದ ಗುಡ್ ಸಿಟಿಜನ್ ಕಾಲೇಜಿನಲ್ಲಿ ರೋಟರಿ ಕ್ಲಬ್ ಆಫ್ ಕ್ವಾಂಟಾ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಾಯಕತ್ವ ಗುಣ ಬೆಳೆಸಿಕೊಂಡು ಸಮಾಜದಲ್ಲಿ ಆದರ್ಶ ವ್ಯಕ್ತಿಗಳಾಗಿ ಬೆಳೆಯಬೇಕು. ರೋಟರಿ ಸಂಸ್ಥೆಯು ಹಲವಾರು ವರ್ಷಗಳಿಂದ ಸಮಾಜಕ್ಕೆ ಪೂರಕವಾದ ಹಲವಾರು ಕಾರ್ಯಕ್ರಮಗಳನ್ನ ಆಯೋಜಿಸುತ್ತಾ ಬಂದಿದೆ. ಇದರ ಸದುಪಯೋಗವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕೆಂದು ತಿಳಿಸಿದರು.

ಕಾಲೇಜಿನಲ್ಲಿ ರೋಟರಿಯ ಎರಡು ವಿದ್ಯಾರ್ಥಿ ಘಟಕಗಳನ್ನು ತೆರೆಯಲಾಯಿತು. ಪ್ರಾಂಶುಪಾಲ ಹೇಮಂತ್ ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಹಾಸನ ರೋಟರಿ ಘಟಕದ ಅಧ್ಯಕ್ಷೆ ಸನ್ಮತಿ ಪ್ರಸಾದ್, ಹೆಚ್.ಕೆ.ರವಿ, ಶಿವಕುಮಾರ ಹಾಗೂ ಗುಡ್ ಸಿಟಿಜನ್ ಪದವಿ ಕಾಲೇಜಿನ ಪ್ರಾಂಶುಪಾಲ ಕಾಂತರಾಜು, ಉಪನ್ಯಾಸಕ ಸಂಜಯ್ ಉಪಸ್ಥಿತರಿದ್ದರು. ವಿದ್ಯಾರ್ಥಿನಿ ದೀಪ್ತಿ ಪ್ರಾರ್ಥಿಸಿದರು, ವಿನ್ಸಿತಾ ಸ್ವಾಗತಿಸಿದರು.

# ನಶೆ ಮುಕ್ತ ಹಾಸನ: ಎಸ್ಪಿ ಶುಭಾನ್ವಿತಾ ಸಂಕಲ್ಪ

## ಪತ್ರಕರ್ತರೊಂದಿಗೆ ಸಂವಾದ ಕಾರ್ಯಕ್ರಮ | ಕಾನೂನು-ಸುವ್ಯವಸ್ಥೆ ಕಾಪಾಡುವ ಭರವಸೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯನ್ನು ಡ್ರಗ್ಸ್ ನಶೆಯಿಂದ ಮುಕ್ತ ಮಾಡುವುದು, ಮಹಿಳೆಯರು, ಮಕ್ಕಳ ಸುರಕ್ಷತೆಗೆ ಒತ್ತು ಹಾಗೂ ರಸ್ತೆ ಅಪಘಾತದಿಂದ ಸಾವು-ನೋವು ತಡೆಯುವುದು ನನ್ನ ಮೊದಲ ಆದ್ಯತೆ ಎಂದು ನೂತನ ಎಸ್ಪಿ ಶುಭಾನ್ವಿತಾ ಹೇಳಿದರು.

ಜಿಲ್ಲಾ ಪತ್ರಕರ್ತರ ಸಂಘದಿಂದ ಸ್ವಾಗತ ಹಾಗೂ ಪರಿಚಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಜಿಲ್ಲೆಯನ್ನು ನಶೆ ಮುಕ್ತ ಮಾಡುವುದು ಮೊದಲ ಆದ್ಯತೆ. ಈ ವಿಚಾರದಲ್ಲಿ ಎರಡು ಕಡೆ ಗಮನ ಹರಿಸಬೇಕಿದೆ. ಬಳಕೆ ಮಾಡುವವರಿಗಿಂತ ಪೂರೈಕೆ ಮಾಡುವವರು ಮುಖ್ಯ ಅಪರಾಧಿಗಳು. ಇದರಿಂದ ಮಕ್ಕಳ ಭವಿಷ್ಯ ಹಾಳಾಗುತ್ತಿದೆ. ಇದರ ತಡೆಗೆ ಪ್ರತಿಯೊಬ್ಬರೂ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು. ಡಗ್ಸ್ ವ್ಯಸನಿಗಳಿಗೆಂದು ತೆರೆದಿರುವ ಪುನರ್ವಸತಿ ಕೇಂದ್ರಗಳಿಗೆ ಭೇಟಿ ನೀಡಿ ಅಲ್ಲಿರುವವರಿಗೆ ಅರಿವು ಮೂಡಿಸಲಾಗುತ್ತಿದೆ ಎಂದರು.

ಮಹಿಳೆಯರು-ಮಕ್ಕಳ ಸುರಕ್ಷಿತೆಗೆ ಒತ್ತು ನೀಡಲಾಗುವುದು. ಜಿಲ್ಲೆಯಲ್ಲಿ ಪೋಕ್ಸೋ ಪ್ರಕರಣ ಹೆಚ್ಚಾಗುತಿದೆ. ಇದನ್ನು ತಡೆಗಟ್ಟಲು ಎಲ್ಲ ಗ್ರಾಪಂ ಮಟ್ಟದಲ್ಲೂ ಜಾಗೃತಿ ಕಾರ್ಯಕ್ರಮ ಮಾಡುತ್ತೇವೆ, ಹಾಗೆಯೇ ಶಾಲೆಗಳಲ್ಲಿ ಸಿ ಬಾಕ್ಸ್ ಇಡಲಾಗುವುದು. ಅದರ ಕೀ ಪೊಲೀಸರ ಬಳಿ ಇರಲಿದೆ, ಹೆಣ್ಣು ಮಕ್ಕಳು ಬಾಕ್ಸ್ ಮೂಲಕ ಮೆಸೇಜ್ ಕೊಡಬಹುದು ಎಂದರು. ಒಂಟಿ ಮಹಿಳೆಯರು, ಒಬ್ಬ ಪೋಷಕರಿಗೆ ಸ್ವ ಉದ್ಯೋಗ ಕಲ್ಪಿಸಿ ಸ್ವಾವಲಂಬನೆ ಮಾಡಲು ಒತ್ತು ನೀಡಲಾಗುವುದು ಎಂದು ತಿಳಿಸಿದರು.

ಇತ್ತೀಚೆಗೆ ರಚನೆಯಾಗಿರುವ ಅಕ್ಕಪಡೆಗೆ ಕಿಕ್ ಬಾಕ್ಸಿಂಗ್ ಇತ್ಯಾದಿ ತರಬೇತಿ ನೀಡಿ ಮಹಿಳಾ ರಕ್ಷಣೆಗೆ ಸಶಕ್ತಗೊಳಿಸಲಾಗುವುದು. ಹಾಗೆಯೇ ಹೆಣ್ಣು ಮಕ್ಕಳಿಗೂ ತರಬೇತಿ ನೀಡಲಾಗುವುದು ಎಂದರು.

ರಸ್ತೆ ಅಪರಾಧ ತಡೆಗೆ ಫೆ.1ರಿಂದ ವಿವಿಧ ಇಲಾಖೆ ಅಧಿಕಾರಿ ಒಳಗೊಂಡ ತಂಡ ರಚನೆ ಮಾಡಿ, ಬ್ಲಾಕ್ ಸ್ಪಾಟ್ ಗುರುತು ಮಾಡಿ, ಅಲ್ಲಿಗೆ ಭೇಟಿ ನೀಡಿ ಯಾಕೆ ಅಪಘಾತ ಘಟಿಸುತ್ತಿವೆ ಎಂಬ ಕಾರಣ ತಿಳಿದು, ಆಕ್ಸಿಡೆಂಟ್ ತಡೆಗೆ ಸಂಬಂಧಪಟ್ಟವರೊಂದಿಗೆ ಪತ್ರ ವ್ಯವಹಾರ ನಡೆಸುವ ಭರವಸೆ ನೀಡಿದರು.

ಹಾಗೆಯೇ ಟ್ರಾಫಿಕ್ ಸಮಸ್ಯೆ, ಆಟೋ ಪಾರ್ಕಿಂಗ್ ಕಿರಿಕಿರಿ ಬಗ್ಗೆಯೂ ಪರಿಹಾರ ಕಂಡು ಹಿಡಿಯಲು ಗಮನ ಹರಿಸಲಾಗುವುದು, ಏನೇ ಇದ್ದರೂ ನಮಗೆ ಮಾಹಿತಿ ಕೊಡಿ, ಸ್ಪಂದನೆಗೆ ನಾವು ಸಿದ್ಧರಿದ್ದೇವೆ. ಯಾರೂ ಕೂಡ ಕಾನೂನು ಕೈಗೆತ್ತಿಕೊಳ್ಳಬೇಡಿ ಎಂದು ಮನವಿ ಮಾಡಿದರು. ನಾನು ಜಿಲ್ಲೆಗೆ ಬಂದು ನಾಲ್ಕು ವಾರ ಕಳೆದಿದ್ದು, ಪತ್ರಕರ್ತರು ಸೇರಿದಂತೆ ಎಲ್ಲರ ಕಡೆಯಿಂದ ನನಗೆ ಸಹಕಾರ ಸಿಕ್ಕಿದೆ. ಸಮಾಜದಲ್ಲಿ ಘಟಿಸುವ ಬೇಡವಾದ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಮಾಧ್ಯಮಗಳ ಜವಾಬ್ದಾರಿ ದೊಡ್ಡದಿದೆ ಎಂದರು.

ಪ್ರಧಾನ ಕಾರ್ಯದರ್ಶಿ ಕೆ.ಜಿ.ಸುರೇಶ್ ಸ್ವಾಗತಿಸಿದರು. ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಕೆ.ಪಿ.ಎಸ್.ಪ್ರಮೋದ್ ವಂದಿಸಿದರು. ಉಪಾಧ್ಯಕ್ಷರಾದ ಎನ್.ನಂಜುಂಡೇಗೌಡ, ಮೋಹನ್ ಕುಮಾರ್, ಕಾರ್ಯದರ್ಶಿಗಳಾದ ಬಿ.ಆರ್.ಬೊಮ್ಮೇಗೌಡ, ಕೆ.ಎಂ.ಹರೀಶ್, ಖುಶ್ವಂತ್, ಖಜಾಂಚಿ ಪ್ರಕಾಶ್ ಬೆಳವಾಡಿ ಮೊದಲಾದವರಿದ್ದರು.



> ಬಾಂಗ್ಲಾ ನುಸುಳುಕೋರರ ಬಗ್ಗೆ ಮಾಹಿತಿ ಇದ್ದರೆ ನಮಗೆ ನೀಡಿ, ಈ ವಿಚಾರದಲ್ಲಿ ಯಾರೂ ಕಾನೂನು ಕ್ರಮಕ್ಕೆ ಮುಂದಾಗಬಾರದು, ಮುಖಚಹರೆ ಅಥವಾ ಬೇರೆ ಕಾರಣದಿಂದ ಕ್ರಮ ಬೇಡ, ನಿಖರ ಮಾಹಿತಿ ಇದ್ರೆ ಕೊಡಿ ನಾವು ಪರಿಶೀಲಿಸಿ, ಅಗತ್ಯಬಿದ್ದರೆ ತನಿಖೆ ನಡೆಸಿ ಕ್ರಮ ಕೈಗೊಳ್ಳುತ್ತೇವೆ.
>
> **- ಶುಭಾನ್ವಿತಾ, ಎಸ್ಪಿ**

### ಪತ್ರಕರ್ತರು-ಪೊಲೀಸ್ ಬಾಂಧವ್ಯ ಚೆನ್ನಾಗಿರಲಿ

ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್. ಕೆಂಚೇಗೌಡ ಮಾತನಾಡಿ, ನಮ್ಮ ಸಂಘ ಸ್ವಾತಂತ್ರ್ಯ ಪೂರ್ವದಲ್ಲಿ ಆರಂಭವಾಗಿದ್ದು, ರಾಜ್ಯದ 31 ಜಿಲ್ಲೆಗಳಿಂದು ಸುಮಾರು 9 ಸಾವಿರ ಸದಸ್ಯರಿದ್ದಾರೆ. ಜಿಲ್ಲೆಯಲ್ಲಿ ಹತ್ತಿರ 300 ಮಂದಿ ಇದ್ದಾರೆ ಎಂದು ವಿವರಿಸಿದರು. ಹಿಂದಿನಿಂದಲೂ ಜಿಲ್ಲೆಯಲ್ಲಿ ಪೊಲೀಸರು ಮತ್ತು ಪತ್ರಕರ್ತರ ನಡುವೆ ಉತ್ತಮ ಬಾಂಧವ್ಯ ಇದೆ. ಅದು ಹಾಗೆಯೇ ಮುಂದುವರಿಯಬೇಕು ಎಂಬುದು ನಮ್ಮ ಆಶಯ ಎಂದರು. ಬಾಂಧವ್ಯ-ಸಮನ್ವಯತೆ ಇದ್ದರೆ ಅಪರಾಧ ಪತ್ತೆ ಹಾಗೂ ತಡೆಗೆ, ನಿಖರ ಮಾಹಿತಿ ಪ್ರಚಾರ, ರವಾನೆಗೆ ಅನುಕೂಲ ಆಗಲಿದೆ ಎಂದರು.

ಕನ್ನಡ ಪೋಸ್ಟ್



# ಜಿಲ್ಲೆಯ ಪ್ರವಾಸಿ ತಾಣಗಳಿಗೆ ಮನಸೋತ ಜಿಲ್ಲಾಧಿಕಾರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ವಿಶ್ವ ಪ್ರಸಿದ್ಧ ಬೇಲೂರು ಹಾಗೂ ಹಳೇಬೀಡಿನ ಐತಿಹಾಸಿಕ ದೇವಾಲಯಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

ಜಿಲ್ಲೆ ಶಿಲ್ಪಕಲೆ, ಇತಿಹಾಸ ಮತ್ತು ಸಂಸ್ಕೃತಿಯ ಅದ್ಭುತ ಸಂಗಮವಾಗಿದ್ದು, ಜಿಲ್ಲೆಯ ಬೇಲೂರು ಮತ್ತು ಹಳೇಬೀಡು ಪಟ್ಟಣಗಳಲ್ಲಿ ಇರುವ ಹೊಯ್ಸಳರ ಕಾಲದ ದೇವಾಲಯಗಳು ಯುನೆಸ್ಕೊ ಪಟ್ಟಿಗೆ ಸೇರಿರುವುದು ಜಿಲ್ಲೆಯ ಪ್ರವಾಸೋದ್ಯಮಕ್ಕೆ ಹೊಸ ಗೌರವ ತಂದಿದೆ. ಈ ಮಾನ್ಯತೆಯಿಂದ ಹಾಸನ ಜಿಲ್ಲೆ ಜಾಗತಿಕ ಪ್ರವಾಸೋದ್ಯಮ ನಕ್ಷೆಯಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ಬೇಲೂರಿನ ಶ್ರೀ ಚನ್ನಕೇಶವ ದೇವಾಲಯವು ಕ್ರಿ.ಶ. 12ನೇ ಶತಮಾನದಲ್ಲಿ ಹೊಯ್ಸಳ ಅರಸ ವಿಷ್ಣುವರ್ಧನನ ಕಾಲದಲ್ಲಿ ನಿರ್ಮಾಣವಾಗಿದ್ದು, ಹೊಯ್ಸಳ ವಾಸ್ತುಶಿಲ್ಪದ ಅತ್ಯುತ್ತಮ ಉದಾಹರಣೆಯಾಗಿದೆ. ದೇವಾಲಯದ ಗೋಡೆಗಳ ಮೇಲೆ ಕೆತ್ತಲಾದ ಸೂಕ್ಷ್ಮ ಶಿಲ್ಪಗಳು, ದೇವತೆಗಳ ಮೂರ್ತಿ, ನೃತ್ಯ ಶಿಲ್ಪಗಳು ಹಾಗೂ ಪೌರಾಣಿಕ ಕಥನಗಳು ಶಿಲ್ಪಿಗಳ ಅಪಾರ ಕಲಾತ್ಮಕತೆಯನ್ನು ಪ್ರತಿಬಿಂಬಿಸುತ್ತವೆ. ಪ್ರತಿವರ್ಷ ಸಾವಿರಾರು ದೇಶಿ ಮತ್ತು ವಿದೇಶಿ ಪ್ರವಾಸಿಗರು ಈ ದೇವಾಲಯದ ಶಿಲ್ಪಸೌಂದರ್ಯವನ್ನು ಕಣ್ತುಂಬಿಕೊಳ್ಳಲು ಭೇಟಿ ನೀಡುತ್ತಾರೆ.

ಹಳೇಬೀಡು ಪಟ್ಟಣದಲ್ಲಿರುವ ಶ್ರೀ ಹೊಯ್ಸಳೇಶ್ವರ ದೇವಾಲಯವು ಶಿವನಿಗೆ ಅರ್ಪಿತವಾದ ಜೋಡಿ ದೇವಾಲಯವಾಗಿದ್ದು, ಹೊಯ್ಸಳ ಸಾಮ್ರಾಜ್ಯದ ಶ್ರೇಷ್ಠ ಶಿಲ್ಪಕಲೆಯ ಸಾಕ್ಷಿಯಾಗಿದೆ. ದೇವಾಲಯದ ಹೊರಗೋಡೆಗಳಲ್ಲಿ ರಾಮಾಯಣ, ಮಹಾಭಾರತ ಮತ್ತು ಪುರಾಣ ಕಥೆಗಳು ಶಿಲ್ಪರೂಪದಲ್ಲಿ ಮೂಡಿಬಂದಿದ್ದು, ಪ್ರತಿ ಶಿಲ್ಪವೂ ಶಿಲ್ಪಿಯ ಸಹನೆ ಮತ್ತು ನೈಪುಣ್ಯವನ್ನು ತೋರಿಸುತ್ತದೆ. ಇತಿಹಾಸದ ಪಲ್ಲಟಗಳು ನಡುವೆಯೂ ಈ ದೇವಾಲಯಗಳು ಇಂದಿಗೂ ಪ್ರವಾಸಿಗರನ್ನು ಆಕರ್ಷಿಸುತ್ತಿವೆ.

ಯುನೆಸ್ಕೊ ಪಟ್ಟಿಯಲ್ಲಿ ಮಾನ್ಯತೆ ಸಿಕ್ಕಿರುವುದರಿಂದ ಹಾಸನ ಜಿಲ್ಲೆಯ ಪ್ರವಾಸೋದ್ಯಮ ಕ್ಷೇತ್ರಕ್ಕೆ ಹೆಚ್ಚಿನ ಉತ್ತೇಜನ ದೊರೆತಿದೆ. ಪ್ರವಾಸಿಗರ ಸಂಖ್ಯೆಯಲ್ಲಿ ಏರಿಕೆ ಕಂಡುಬಂದಿದ್ದು, ಸ್ಥಳೀಯರಿಗೆ ಮಾರ್ಗದರ್ಶಕ ಸೇವೆ, ವಾಸ್ತವ್ಯ, ಸಾರಿಗೆ ಹಾಗೂ ಹೋಟೆಲ್ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳು ಹೆಚ್ಚಾಗಿವೆ. ಇದರಿಂದ ಜಿಲ್ಲೆಯ ಆರ್ಥಿಕ ಚಟುವಟಿಕೆಗಳಿಗೂ ಸಕಾರಾತ್ಮಕ ಪರಿಣಾಮ ಉಂಟಾಗಿದೆ.

ಯುನೆಸ್ಕೊ ತಾಣಗಳ ಸಂರಕ್ಷಣೆ ಮತ್ತು ಅಭಿವೃದ್ಧಿಗೆ ಜಿಲ್ಲಾ ಆಡಳಿತವು ವಿಶೇಷ ಗಮನ ಹರಿಸಿದೆ. ಪ್ರವಾಸಿಗರ ಅನುಕೂಲಕ್ಕಾಗಿ ಮೂಲಸೌಕರ್ಯ ಅಭಿವೃದ್ಧಿ, ಸ್ವಚ್ಛತೆ, ಮಾಹಿತಿ ಫಲಕಗಳ ಅಳವಡಿಕೆ, ಪಾರ್ಕಿಂಗ್ ವ್ಯವಸ್ಥೆ ಹಾಗೂ ಭದ್ರತಾ ಕ್ರಮಗಳನ್ನು ಬಲಪಡಿಸಲಾಗುತ್ತಿದೆ. ಜೊತೆಗೆ ಸ್ಥಳೀಯ ಸಮುದಾಯವನ್ನು ಪ್ರವಾಸೋದ್ಯಮದ ಭಾಗವನ್ನಾಗಿಸುವ ನಿಟ್ಟಿನಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಶಿಲ್ಪಕಲೆಯ ಶ್ರೇಷ್ಠತೆಯನ್ನು ನೇರವಾಗಿ ಅನುಭವಿಸಲು ಬಯಸುವ ಪ್ರತಿಯೊಬ್ಬರಿಗೂ ಹಾಸನ ಜಿಲ್ಲೆಯ ಯುನೆಸ್ಕೊ ಪ್ರವಾಸಿ ತಾಣಗಳು ಮರೆಯಲಾಗದ ಅನುಭವವನ್ನು ನೀಡುತ್ತವೆ. ಇತಿಹಾಸ, ಸಂಸ್ಕೃತಿ ಮತ್ತು ಸೌಂದರ್ಯದ ಸಂಗಮವನ್ನು ನೋಡಲು ಹಾಸನ ಜಿಲ್ಲೆಗೆ ಭೇಟಿ ನೀಡುವಂತೆ ಜಿಲ್ಲಾ ಆಡಳಿತ ಮತ್ತು ಪ್ರವಾಸೋದ್ಯಮ ಇಲಾಖೆಯಿಂದ ಹೃತ್ಪೂರ್ವಕವಾಗಿ ಪ್ರವಾಸಿಗರನ್ನು ಹಾಗೂ ಇತಿಹಾಸಕ್ತರನ್ನು ಆಹ್ವಾನಿಸುತ್ತದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಅಧ್ಯಕ್ಷೆ ಕೆ.ಎಸ್ ಲತಾ ಕುಮಾರಿ ತಿಳಿಸಿದ್ದಾರೆ.

# ಶಾಸಕ ಶಿವಲಿಂಗೇಗೌಡ ಮಾನಸಿಕ ಸ್ಥಿಮಿತ ಕಳೆದುಕೊಂಡಿದ್ದಾರೆ: ಬಿಜೆಪಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಅರಸೀಕೆರೆ: ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಸರ್ಕಾರಿ ಕಾರ್ಯಕ್ರಮಗಳನ್ನು ರಾಜಕೀಯ ಹಾಗು ಪ್ರತಿಪಕ್ಷಗಳನ್ನು ಟೀಕಿಸಲು ಬಳಸಿಕೊಳ್ಳುತ್ತಿದ್ದು,

ಮಾನಸಿಕ ಸ್ಥಿಮಿತ ಕಳೆದುಕೊಂಡಂತೆ ವರ್ತಿಸುತ್ತಿದ್ದಾರೆಂದು ತಾಲ್ಲೂಕು ಬಿಜೆಪಿ ಗ್ರಾಮೀಣ ಮಂಡಲ ಮಾಜಿ ಪ್ರಧಾನ ಕಾರ್ಯದರ್ಶಿ ಶಿವರಾಜ್ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಇತ್ತೀಚೆಗೆ ನಡೆದ ವಿದ್ಯುತ್ ಕೇಬಲ್ ಅಳವಡಿಕೆಗೆ ಚಾಲನೆ ನೀಡುವ ಸರ್ಕಾರಿ ಕಾರ್ಯಕ್ರಮದಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಏಕವಚನದಲ್ಲಿ ನಿಂದಿಸಿದ್ದಾರೆ. ನಾಲ್ಕು ಬಾರಿ ಶಾಸಕರಾಗಿ ಸಾರ್ವಜನಿಕ ಜೀವನದಲ್ಲಿರುವ ಶಿವಲಿಂಗೇಗೌಡರಿಗೆ ಭಾಷಾ ಜ್ಞಾನ ಇಲ್ಲದಿರುವುದು ವಿಪರ್ಯಾಸವೆಂದು ಟೀಕಿಸಿದರು.

ಅಧಿಕಾರಿಗಳು ಶಾಸಕರ ಅಣತಿಯಂತೆ ಕೆಲಸ ಮಾಡುವುದನ್ನು ಬಿಟ್ಟು ಕಾನೂನು ಪಾಲಿಸಬೇಕು. ತಾವು ಸರ್ಕಾರದ ಸೇವಕ ಎಂಬ ಭಾವನೆಯೊಂದಿಗೆ ಕಾರ್ಯ ನಿರ್ವಹಿಸದೆ ಹೋದರೆ ಮುಂದಿನ ದಿನಗಳಲ್ಲಿ ಪಶ್ಚಾತಾಪ ಪಡಬೇಕಾಗುತ್ತದೆ. ಚುನಾವಣೆಗೆ ಇನ್ನು ಎರಡು ವರ್ಷವಿದ್ದರೂ ಸೋಲಿನ ಭೀತಿಯಿಂದ ಶಿವಲಿಂಗೇಗೌಡರು ಮಾನಸಿಕ ಸ್ಥಿಮಿತ ಕಳೆದುಕೊಂಡು ಮಾತನಾಡುತ್ತಿದ್ದಾರೆ. ತಾಕತ್ತಿದ್ದವರು ತಮ್ಮ ಎದುರು ಸ್ಪರ್ಧಿಸಲಿ ಎಂದು ಆಹ್ವಾನಿಸುತ್ತಿರುವುದು ಸೋಲಿನ ಮುನ್ಸೂಚನೆ ಎಂದು ವಾಗ್ದಾಳಿ ನಡೆಸಿದರು.

ಸುದ್ದಿಗೋಷ್ಠಿಯಲ್ಲಿ ನಗರ ಬಿಜೆಪಿ ಮಂಡಲದ ಪ್ರಧಾನ ಕಾರ್ಯದರ್ಶಿ ಎ.ಎಸ್.ಚಂದ್ರಶೇಖರ್, ಎ.ಸಿ.ಶ್ರೀನಿವಾಸ್, ಎಸ್‌ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿ, ಮೋಹನ್ ಕುಮಾರ್, ಆರ್.ಚಂದ್ರಶೇಖರ್, ಶಾನೆಗೆರೆ ತಿಮ್ಮೇಗೌಡ ಹಾಜರಿದ್ದರು.

# ಅಂಗವಿಕಲರ ಕಲ್ಯಾಣಾಧಿಕಾರಿ ಅನುಪಮಾ ವಿರುದ್ಧ ಆರೋಪಕ್ಕೆ ಖಂಡನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ಜಿಲ್ಲಾ ಅಂಗವಿಕಲ ಕಲ್ಯಾಣ ಅಧಿಕಾರಿ ಕೆ.ಆರ್. ಅನುಪಮಾ ಅವರು ದಕ್ಷತೆಯಿಂದ ಕೆಲಸ ಮಾಡುತ್ತಿದ್ದು ವೈಯಕ್ತಿಕ ಹಿತಾಸಕ್ತಿಗಾಗಿ ಕರ್ನಾಟಕ ಅಂಧರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ತಮ್ಮಯ್ಯ ನಿರಾಧಾರ ಆರೋಪ ಮಾಡುತ್ತಿದ್ದಾರೆ ಎಂದು ಪರಿಶ್ರಮ ದಿವ್ಯಾಂಗ ಸ್ಪೋರ್ಟ್ಸ್ ಅಕಾಡೆಮಿ ಅಧ್ಯಕ್ಷೆ ಎಸ್.ಡಿ.ಕಮಲಾಕ್ಷಿ ಸ್ಪಷ್ಟಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅನುಪಮಾ ಅವರು ಜಿಲ್ಲೆಗೆ ಬಂದ ಬಳಿಕ ಇಲಾಖೆಯಲ್ಲಿ ಸಾಕಷ್ಟು ಸುಧಾರಣೆಗಳಾಗುತ್ತಿವೆ. ನೈಜ ಫಲಾನುಭವಿಗಳಿಗೆ ಸರ್ಕಾರದ ಸವಲತ್ತು ದೊರೆಯುತ್ತಿವೆ. ಕೆಲವರು ಇಲಾಖೆಯನ್ನು ವೈಯಕ್ತಿಕ ಲಾಭಕ್ಕೆ ಬಳಸಿಕೊಳ್ಳುತ್ತಿದ್ದರು. ವಿವಿಧ ಯೋಜನೆಯ ಅನುದಾನಕ್ಕೆ ಪ್ರಯತ್ನಿಸುತ್ತಿದ್ದರು.

ಅದಕ್ಕೆ ಅನುಪಮಾ ಅವರು ತಡೆಯೊಡ್ಡಿದ್ದರಿಂದ ತಮ್ಮಯ್ಯ ಆರೋಪ ಮಾಡುತ್ತಿದ್ದು ಯಾವುದೇ ಹುರುಳಿಲ್ಲ ಎಂದರು.

ಇಲಾಖೆಯ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು ತಾವು ನೇಮಕ ಆಗಿರುವ ಗ್ರಾಮ ಪಂಚಾಯಿತಿಗಳಲ್ಲಿ ಕಡ್ಡಾಯವಾಗಿ ಹಾಜರಾಗಿದ್ದು, ಇಲಾಖೆಯ ಮಾರ್ಗಸೂಚಿ ಅನುಸಾರ ಕರ್ತವ್ಯ ನಿರ್ವಹಿಸಬೇಕಿದೆ.

ಹೀಗಿದ್ದರೂ ಯಾವುದೋ ಒಂದು ಕಾರಣಕ್ಕೆ ಇಲ್ಲ ಸಲ್ಲದ ಆರೋಪ ಮಾಡುವುದು ಸರಿಯಲ್ಲ, ಸಾಕ್ಷಿ ಇದ್ದರೆ ಬಹಿರಂಗ ಪಡಿಸಲಿ ಎಂದರು.

ಕೆಲವು ಕಾರ್ಯಕರ್ತರು ಕೆಲಸ ಮಾಡದೆ ಸಂಬಳ ಪಡೆಯುತ್ತಿದ್ದರು. ಗ್ರಾಮ ಪಂಚಾಯಿತಿಗೆ ಹಾಜರಾಗದೆ, ಅಂಗವಿಕಲರ ಮನೆಗೂ ಭೇಟಿ ನೀಡದೆ ತಪ್ಪು ವರದಿ ಸಲ್ಲಿಸುತ್ತಿದ್ದರು. ಈ ಅಕ್ರಮಕ್ಕೆ ಅನುಪಮಾ ಅವರು ಕಡಿವಾಣ ಹಾಕಿ ಕಡ್ಡಾಯವಾಗಿ ಜಿಪಿಎಸ್ ಫೋಟೊ ಅಪ್ಲೋಡ್ ಮಾಡುವಂತೆ ಸೂಚಿಸಿದ್ದಾರೆ. ಹೀಗಾಗಿ ಅವರ ವಿರುದ್ಧ ಇಲ್ಲಸಲ್ಲದ ಆರೋಪ ಮಾಡಲಾಗುತ್ತಿದೆಯೆಂದರು.

ಪದಾಧಿಕಾರಿಗಳಾದ ಫಯಾಜ್ ಪಾಷ, ಕೇಶವ, ಚಂದ್ರಶೇಖರ್ ರಾಜ್ ಅರಸ್, ಮಣಿ, ಮುದಸಿರ್ ಇದ್ದರು.

# ಬೇಲೂರಿನಲ್ಲಿ ಅರ್ಥಪೂರ್ಣ ಹಿಂದು ಸಮಾಜೋತ್ಸವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಬೇಲೂರು: ಪಟ್ಟಣದಲ್ಲಿ ತಾಲ್ಲೂಕು ಹಿಂದು ಸಮಾಜೋತ್ಸವ ಶ್ರದ್ಧಾಭಕ್ತಿ ಹಾಗೂ ಅದ್ದೂರಿಯಾಗಿ ನೆರವೇರಿತು.

ಹಿಂದು ಸಮಾಜದ ಏಕತೆ, ಸಂಸ್ಕೃತಿ ಹಾಗೂ ಪರಂಪರೆಯ ಮಹತ್ವವನ್ನು ಸಾರುವ ಉದ್ದೇಶದಿಂದ ಆಯೋಜಿಸಲಾಗಿದ್ದ ಈ ಕಾರ್ಯಕ್ರಮಕ್ಕೆ ಸಾವಿರಾರು ಹಿಂದು ಕಾರ್ಯಕರ್ತರು ಹಾಗೂ ಸಾರ್ವಜನಿಕರು ಸಾಕ್ಷಿಯಾದರು.

ಬಸವೇಶ್ವರ ವೃತ್ತದಿಂದ ಶೋಭಾಯಾತ್ರೆ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ವಿವಿಧ ಕಲಾತಂಡಗಳು, ಭಜನೆ, ವಾದ್ಯ ಮೇಳಗಳು ಹಾಗೂ ಕೇಸರಿ ಧ್ವಜಗಳೊಂದಿಗೆ ನಡೆದ ಮೆರವಣಿಗೆ ನಗರದಾದ್ಯಂತ ಭಕ್ತಿ ಮತ್ತು ಸಂಭ್ರಮದ ವಾತಾವರಣ ಮೂಡಿಸಿತು.

ನೂರಾರು ಮಹಿಳೆಯರಿಂದ ಪೂರ್ಣಕುಂಭದೊಂದಿಗೆ ಕಾರ್ಯಕ್ರಮ ಆರಂಭಗೊಂಡು, ವಿವಿಧ ಮಠಾಧೀಶರು, ಧಾರ್ಮಿಕ ಮುಖಂಡರು, ಸಮಾಜದ ಗಣ್ಯರು, ಯುವಕರು ಹಾಗೂ ಮಕ್ಕಳು ಶೋಭಾಯಾತ್ರೆಯಲ್ಲಿ ಭಾಗವಹಿಸಿದರು.

ಯಸಳೂರಿನ ತೆಂಕಲಗೂಡು ಬೃಹನ್ಮಠದ ಶ್ರೀ ಷ.ಬ್ರ. ಚನ್ನಸಿದ್ದೇಶ್ವರ ಸ್ವಾಮೀಜಿ ಮಾತನಾಡಿ, ಹಿಂದು ಸಮಾಜವು ಸಂಘಟಿತವಾಗಿ ಸಂಸ್ಕೃತಿ, ಧರ್ಮ ಹಾಗೂ ರಾಷ್ಟ್ರೀಯ ಮೌಲ್ಯಗಳನ್ನು ಉಳಿಸಿಕೊಳ್ಳಬೇಕೆಂದು ಕರೆ ನೀಡಿದರು.

ಭಕ್ತಿ ಹಾಗೂ ಶಕ್ತಿಯನ್ನು ಯಾರಿಂದಲೂ ಕಿತ್ತುಕೊಳ್ಳಲು ಸಾಧ್ಯವಿಲ್ಲ. ಧರ್ಮಕ್ಕೆ ನಮ್ಮ ಅಗತ್ಯವಿಲ್ಲ, ಆದರೆ ನಮಗೆ ಧರ್ಮದ ಅಗತ್ಯವಿದೆ. ನಮ್ಮ ಪೂರ್ವಜರು ಧರ್ಮ ರಕ್ಷಣೆಗಾಗಿ ಪ್ರಾಣ ತ್ಯಾಗ ಮಾಡಿದ್ದಾರೆ. ಆ ತ್ಯಾಗದ ಫಲವಾಗಿ ನಾವಿಂದು ಸ್ವತಂತ್ರವಾಗಿ ಬದುಕುತ್ತಿದ್ದೇವೆ ಎಂದು ತಿಳಿಸಿದರು. 1925ರಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಸ್ಥಾಪನೆಯಾಗದೆ ಇದ್ದಿದ್ದರೆ ಹಿಂದು ಧರ್ಮವನ್ನು ಉಳಿಸಿಕೊಳ್ಳುವುದು ಕಷ್ಟವಾಗುತ್ತಿತ್ತು. ಛತ್ರಪತಿ ಶಿವಾಜಿ ಮಹಾರಾಜರು, ಸುಭಾಷ್ ಚಂದ್ರ ಬೋಸ್, ಭಗತ್ ಸಿಂಗ್, ಸಂಗೊಳ್ಳಿ ರಾಯಣ್ಣನಂತಹ ಮಹಾನ್ ಹೋರಾಟಗಾರರ ಕುರಿತು ಮಕ್ಕಳಿಗೆ ತಿಳಿಸಬೇಕಿದೆ. ಕೇವಲ ಕೇಸರಿ ಶಾಲು ಧರಿಸುವುದರಿಂದ ಧರ್ಮ ಉಳಿಯದು, ಅದು ಮನಸ್ಸು ಮತ್ತು ನಡೆನುಡಿಯಲ್ಲಿ ಇರಬೇಕು. ಭಕ್ತಿ ಆಚರಣೆಯಲ್ಲಿ ವ್ಯಕ್ತವಾಗಬೇಕು ಎಂದರು. ಸಾಮಾಜಿಕ ಕಾರ್ಯಕರ್ತ ಮಹಿಪಾಲ್ ಮಾತನಾಡಿ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಶತಮಾನೋತ್ಸವದ ಅಂಗವಾಗಿ ದೇಶಾದ್ಯಂತ ಹಿಂದು ಸಮಾಜೋತ್ಸವ ಆಯೋಜಿಸಲಾಗುತ್ತಿದೆ. ಜಗತ್ತಿನ ಅತ್ಯಂತ ಪ್ರಾಚೀನ ಹಾಗೂ ಏಕೈಕ ಸನಾತನ ಧರ್ಮ ಹಿಂದು ಧರ್ಮವಾಗಿದ್ದು, ಇದರಲ್ಲಿ ಹುಟ್ಟಿರುವುದು ನಮ್ಮ ಪುಣ್ಯ. ಋಷಿಮುನಿಗಳ ತಪಸ್ಸು, ಯೋಗ ಹಾಗೂ ಸಂಕಲ್ಪದಿಂದ ಉದ್ಭವಿಸಿದ ಧರ್ಮವೇ ಹಿಂದೂ ಧರ್ಮ ಎಂದು ಹೇಳಿದರು.

ಶಾಸಕ ಹೆಚ್.ಕೆ. ಸುರೇಶ್, ಹಿಂದು ಸಮಾಜೋತ್ಸವ ನಿರ್ವಹಣಾ ಸಮಿತಿ ತಾಲೂಕು ಅಧ್ಯಕ್ಷ ರೇಣುಕುಮಾರ್, ಗೌರವಾಧ್ಯಕ್ಷ ಶೈಲೇಶ್, ನಗರಾಧ್ಯಕ್ಷ ಭರತ್, ಉಪಾಧ್ಯಕ್ಷ ಬಿ.ಬಿ. ಶಿವರಾಜ್, ನಾಗೇಶ್ (ಗುಂಡ), ಮೋಹನ್, ಶ್ರೀವತ್ಸ ಇತರರಿದ್ದರು.

# ಆಲೂಗಡ್ಡೆ ಮೇಳದಿಂದ ರೈತರಿಗೆ ಪ್ರಯೋಜನವಿಲ್ಲ: ರೈತ ಸಂಘ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದಲ್ಲಿ ಜ. 26 ಹಾಗೂ 27ರಂದು ಜಿಲ್ಲಾಡಳಿತ, ತೋಟಗಾರಿಕೆ ಇಲಾಖೆಯಿಂದ ಹಮ್ಮಿಕೊಂಡಿದ್ದ ಆಲೂಗೆಡ್ಡೆ ಮೇಳ ಅಧಿಕಾರಿಗಳಿಗೆ ಲಾಭ ಮಾಡಿಕೊಟ್ಟಿತೇ ಹೊರತು ರೈತರಿಗೆ ಪ್ರಯೋಜನವಾಗಲಿಲ್ಲವೆಂದು ರೈತ ಸಂಘದ ಜಿಲ್ಲಾಧ್ಯಕ್ಷ ಕಣಗಾಲ್ ಮೂರ್ತಿ ಆರೋಪಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಆಲೂಗೆಡ್ಡೆಗೆ ಉತ್ತೇಜನ ನೀಡುವ ಸಲಹೆ-ಸೂಚನೆ ನೀಡಲಿಲ್ಲ. ರೈತರಿಗೆ ಕಾರ್ಯಕ್ರಮದಲ್ಲಿ ಮಾತನಾಡಲು ಅವಕಾಶವೇ ಸಿಗಲಿಲ್ಲ. ಉದ್ಘಾಟನೆಗೆ ಬಂದಿದ್ದ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ತರಾತುರಿಯಲ್ಲಿ ಭಾಷಣ ಮಾಡಿ ಅಲ್ಲಿಂದ ನಿರ್ಗಮಿಸಿದರು. ಕನಿಷ್ಠ ಅಧಿಕಾರಿಗಳು, ಸಂಸದರು ಅಥವಾ ಶಾಸಕರನ್ನು ಅಲ್ಲೇ ಇರುವಂತೆ ಹೇಳಲಿಲ್ಲ. ಕಾಟಾಚಾರಕ್ಕೆ ಮಾಡಿದ ಮೇಳ ಅದಾಗಿತ್ತು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಿಂದೆ ಲಕ್ಷಾಂತರ ಹೆಕ್ಟೇರ್‌ಗಳಲ್ಲಿ ಬೆಳೆಯುತ್ತಿದ್ದ ಆಲೂಗೆಡ್ಡೆ ಇಂದು ಸೀಮಿತ ಪ್ರದೇಶಕ್ಕೆ ಬಂದು ನಿಂತಿದೆ. ಅದಕ್ಕೆ ಕಾರಣ ಅಂಗಮಾರಿ ರೋಗ. ರೋಗ ನಿರ್ಮೂಲನೆಗೆ ಕ್ರಮ ಕೈಗೊಳ್ಳಬೇಕು. ರೈತರಲ್ಲಿ ಮತ್ತೆ ಆಲೂಗೆಡ್ಡೆ ಬೆಳೆಯುವ ಉತ್ಸಾಹ ಮೂಡಿದೆ. ಹಾಗಾಗಿ ಮುಂದಿನ ದಿನಗಳಲ್ಲಿ ಇಲಾಖೆಯಿಂದಲೇ ದೃಢೀಕರಿಸಿ ಬಿತ್ತನೆ ಆಲೂಗೆಡ್ಡೆ ವಿತರಿಸಬೇಕು. ಅಂಗಮಾರಿ ಮತ್ತಿತರ ಕಾರಣಗಳಿಂದ ಬೆಳೆ ನಾಶವಾದರೆ ಇಲಾಖೆಯಿಂದಲೇ ಪರಿಹಾರ ಕಲ್ಪಿಸಬೇಕೆಂದು ಆಗ್ರಹಿಸಿದರು. ರೈತ ಸಂಘದ ತಾಲ್ಲೂಕು ಅಧ್ಯಕ್ಷ ಮಂಜುನಾಥ್ ಮಾತನಾಡಿ, ಆಲೂಗೆಡ್ಡೆ ಮೇಳದಿಂದ ನಮಗೆ ಯಾವುದೇ ಪ್ರಯೋಜನ ಸಿಗಲಿಲ್ಲ. ಹಾಗಾಗಿ ಮುಂದೆ ಎಲ್ಲ ಇಲಾಖೆಯವರು ಜವಾಬ್ದಾರಿ ತೆಗೆದುಕೊಂಡು ಗುಣಮಟ್ಟದ ಆಲೂಗೆಡ್ಡೆ ನೀಡಬೇಕು. ಜೊತೆಗೆ ಬೆಳೆ ಪರಿಹಾರವನ್ನೂ ನೀಡುವಂತಾಗಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಪದ್ಮಪ್ರಭು, ಸುರೇಶ್, ಮನು, ಲಕ್ಷ್ಮಣ ಇದ್ದರು.

# ರೋಟರಿ ಕ್ಲಬ್ ಆಫ್ ಹಾಸನ್‌ಗೆ ಪಬ್ಲಿಕ್ ಇಮೇಜ್ ಪ್ರಶಸ್ತಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ರೋಟರಿ ಜಿಲ್ಲೆ 3182ರ ಸ್ಪಂದನಾ ಜಿಲ್ಲಾ ಸಮ್ಮೇಳನದಲ್ಲಿ ರೋಟರಿ ಕ್ಲಬ್ ಆಫ್ ಹಾಸನ ರಾಯಲ್ ಸಂಸ್ಥೆಗೆ ಪಬ್ಲಿಕ್ ಇಮೇಜ್ ಪ್ರಶಸ್ತಿ ಲಭಿಸಿದೆ ಎಂದು ರಾಯಲ್ ಕ್ಲಬ್ ಅಧ್ಯಕ್ಷ ಬಿ.ಕೆ. ಗಂಗಾಧರ್ ತಿಳಿಸಿದ್ದಾರೆ.

ನಗರದ ಬಿ.ಕಾಟೀಹಳ್ಳಿ ಯುನೈಟೆಡ್ ಕ್ಯಾಂಪಸ್‌ನಲ್ಲಿ ಈಚೆಗೆ ನಡೆದ ರೋಟರಿ ಸಮ್ಮೇಳನದಲ್ಲಿ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, ರೋಟರಿಯ 84 ಕ್ಲಬ್‌ಗಳ ಪೈಕಿ ಕೆಲವೇ ಕೆಲವು ಕ್ಲಬ್‌ಗಳಿಗೆ ಈ ಪ್ರಶಸ್ತಿ ನೀಡಲಾಗಿದೆ. ಜೋನ್ 9ರ ರೋಟರಿ ಕ್ಲಬ್‌ಗಳ ಪೈಕಿ ರೋಟರಿ ರಾಯಲ್ ಕ್ಲಬ್‌ಗೆ ಈ ಪ್ರಶಸ್ತಿ ಲಭ್ಯವಾಗಿದೆ. ಜಿಲ್ಲಾ ಗವರ್ನರ್ ಕೆ. ಪಾಲಾಕ್ಷ ಅವರು 2025-26ನೇ ಶೈಕ್ಷಣಿಕ ಸಾಲಿಗೆ 10,000 ಸಾವಿರ ಸಸಿ ನೆಡುವ ಗುರಿ ಹೊಂದಿದ್ದರು. ಅವರ ಈ ಯೋಜನೆಯನ್ನು ರಾಯಲ್ ಕ್ಲಬ್ ಕೇವಲ ಒಂದೇ ಕಾರ್ಯಕ್ರಮದಲ್ಲಿ ಹತ್ತು ಸಾವಿರ ಸಸಿ ನೆಡುವ ಮೂಲಕ ಗಮನ ಸೆಳೆಯುವ ಮೂಲಕ ಗುಣಮಟ್ಟದ ಕಾರ್ಯಕ್ರಮಗಳನ್ನು ಜೋನ್ 9ರ ವಲಯ ಮಟ್ಟದಲ್ಲಿ ಮಾಡಿಕೊಂಡು ಬರುತ್ತಿರುವುದನ್ನು ಗಮನಿಸಿ ಈ ಪ್ರಶಸ್ತಿ ನೀಡಲಾಗಿದೆ. ಸಾಮಾಜಿಕ ಸೇವೆ ರೋಟರಿ ಧ್ಯೇಯವಾಗಿದ್ದು, ಸಸಿ ವಿತರಣೆ, ಪೌಷ್ಟಿಕ ಆಹಾರ ಜಾಗೃತಿ, ಪ್ರತಿಭಾ ಪುರಸ್ಕಾರ, ಶಾಲಾ ಮಕ್ಕಳಿಗೆ ಭತ್ತದ ನಾಟಿ ಮಾಡಿಸುವ ಕಾರ್ಯಕ್ರಮ, ಪದವಿ ವಿದ್ಯಾರ್ಥಿಗಳಿಗೆ ಹೈನುಗಾರಿಕೆ ಉದ್ಯಮದ ಕುರಿತು ಜಾಗೃತಿ, ಎಸ್‌ಎಸ್‌ಎಲ್‌ಸಿ ಮಕ್ಕಳಿಗೆ ಪರೀಕ್ಷೆ ಎದುರಿಸುವ ಕುರಿತು ಜಾಗೃತಿ ಹೀಗೆ ಹತ್ತು ಹಲವು ಸಾಮಾಜಿಕ ಕಾರ್ಯಗಳನ್ನು ರಾಯಲ್ ಕ್ಲಬ್ ನಡೆಸಿಕೊಂಡು ಬರುತ್ತಿದ್ದು, ಈ ಪ್ರಶಸ್ತಿ ದೊರೆತಿರುವುದು ಮುಂದಿನ ದಿನಗಳಲ್ಲಿ ಮತ್ತಷ್ಟು ಸಾಮಾಜಿಕ ಸೇವಾ ಕಾರ್ಯಗಳನ್ನು ಮಾಡಲು ಶಕ್ತಿ ತುಂಬಿದಂತಾಗಿದೆ ಎಂದು ತಿಳಿಸಿದ್ದಾರೆ.

ಜಿಲ್ಲಾ ಗವರ್ನರ್ ಕೆ. ಪಾಲಾಕ್ಷ, ಸಹಾಯಕ ಗವರ್ನರ್ ಜೆ.ಎನ್. ಮಂಜುನಾಥ್, ಪಬ್ಲಿಕ್ ಇಮೇಜ್ ವಿಭಾಗದ ಮುಖ್ಯಸ್ಥೆ ಡಾ. ಸೌಮ್ಯ ಮಣಿ, ವಲಯ ಸೇನಾನಿ ಮಮತಾ ಪಾಟೀಲ್ ಅವರುಗಳು ಪ್ರಶಸ್ತಿ ನೀಡಿ ಗೌರವಿಸಿದರು.

ರಾಯಲ್ ಕ್ಲಬ್ ಕಾರ್ಯದರ್ಶಿ ಪಿ.ರವಿ ಕುಮಾರ್, ಖಜಾಂಚಿ ಎಚ್. ಕೆ.ದಿಲೀಪ್ ಕುಮಾರ್, ಮಾಜಿ ಅಧ್ಯಕ್ಷರಾದ ಯೋಗೀಶ್, ಡಾ. ವಿಕ್ರಂ, ಸಚಿನ್ ಹಾಗೂ ಸದಸ್ಯರಾದ ಸ್ವಾದೀಶ್, ವೇಣುಗೋಪಾಲ್, ನಿತ್ಯಾನಂದ, ಚಂದನ್ ಹಾಗೂ ಇತರರು ಹಾಜರಿದ್ದರು.

# ಭಾರತೀ ತೀರ್ಥ ಕೃಪಾಭವನ ಕಾಮಗಾರಿ ವೀಕ್ಷಿಸಿದ ಅಶೋಕ್ ಹಾರನಹಳ್ಳಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ತಾಲೂಕಿನ ರಾಮನಾಥಪುರ ಕಾವೇರಿ ನದಿ ದಂಡೆಯಲ್ಲಿ ನೂತನವಾಗಿ ನಿರ್ಮಾಣಗೊಳ್ಳುತ್ತಿರುವ ಶೃಂಗೇರಿ ಶಾಖಾ ಮಠದ ಶ್ರೀ ಭಾರತೀ ತೀರ್ಥ ಕೃಪಾಭವನ ಮತ್ತು ದೇವಾಲಯಗಳ ಅಭಿವೃದ್ಧಿಗೆ ಪ್ರತಿಯೊಬ್ಬರು ಸಹಕಾರ ನೀಡಬೇಕೆಂದು ಮಾಜಿ ರಾಜ್ಯ ಅಡ್ವೋಕೇಟ್ ಜನರಲ್ ಅಶೋಕ್ ಹಾರನಹಳ್ಳಿ ತಿಳಿಸಿದರು.

ಪವಿತ್ರ ಶೃಂಗೇರಿ ಮಠದ ಜಾಗದಲ್ಲಿ ಶ್ರೀ ಗಣಪತಿ ಜಗನ್ಮಾತೆ ಶಾರದಾಂಭೆ ಹಾಗೂ ಶಂಕರಭಗವತ್ಪಾದರ ಪ್ರತ್ಯೇಕ ಕಲ್ಲಿನ ಗರ್ಭಗುಡಿಗಳು ಜೊತೆಗೆ ಪ್ರಾಂಗಣದೊಳಗೆ ಹೊಂದಿಕೊಂಡಿರುವ ಮತ್ತು ಪ್ರತ್ಯೇಕ ವಿಮಾನ ಗೋಪುರ ಮತ್ತು ರಾಜಗೋಪುರಗಳು ಸುಂದರವಾಗಿ ಕಾಣಲು ಕಾರ್ವಿಂಗ್ ಕೆಲಸಗಳನ್ನು ವೀಕ್ಷಣೆ ಮಾಡಿ ಮಾತನಾಡಿದರು.

ದಕ್ಷಿಣ ಕಾಶಿ ಎಂದೇ ಪ್ರಖ್ಯಾತಿ ಪಡೆದಿರುವ ರಾಮನಾಥಪುರದ ಕಾವೇರಿ ನದಿ ದಂಡೆಯಲ್ಲಿರುವ ಪುಷ್ಕರಣಿ ಹಾಗೂ ಚತುರ್ಯುಗಮೂರ್ತಿ ಶ್ರೀರಾಮೇಶ್ವರ ದೇವಾಲಯದ ಪಕ್ಕದಲ್ಲಿ ನಿರ್ಮಾಣವಾಗಿರುವ ಶೃಂಗೇರಿ ಶಾಖಾ ಮಠದ ಶ್ರೀ ಭಾರತೀತೀರ್ಥ ಕೃಪಾಭವನ ಮತ್ತು ದೇವಾಲಯಗಳ ಕಾಮಗಾರಿ ಆದಷ್ಟು ಬೇಗ ಪೂರ್ಣಗೊಂಡು ಭಕ್ತರಿಗೆ ಅನುಕೂಲವಾಗಬೇಕಿದೆ. ಸುಮಾರು 2 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಅಭಿವೃದ್ಧಿ ಕಾಮಗಾರಿಗೆ ತಾವು ಕೂಡ ಸಹಾಯ ಸಹಕಾರ ನೀಡಲಾಗುವುದಲ್ಲದೇ ಹೆಚ್ಚಿನ ರೀತಿಯಲ್ಲಿ ಇನ್ನೂ ಹಲವಾರು ಭಕ್ತರಿಂದ ಸಹಾಯ ಸಹಕಾರ ಕೊಡಿಸುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಶೃಂಗೇರಿ ಶ್ರೀ ಶಂಕರಮಠದ ವ್ಯವಸ್ಥಾಪಕ ಕೋಣನೂರು ಕೆ. ಗಣೇಶ್, ಪತ್ರಕರ್ತ ಎಂ.ಎನ್. ಕುಮಾರಸ್ವಾಮಿ ಇದ್ದರು.


# ಸತ್ಯ-ಅಹಿಂಸೆಯ ದಾರಿಯಲ್ಲಿ ಅಮರರಾದ ಮಹಾತ್ಮ ಗಾಂಧೀಜಿ

**- ಅಂತೋಣಿ ಮುತ್ತು ವಿ.**
**ಶಿಕ್ಷಕರು (7259675543)**

ಪ್ರತಿ ವರ್ಷ ಜನವರಿ 30ರಂದು ಆಚರಿಸಲ್ಪಡುವ ಶಹೀದರ ದಿನವು ಭಾರತದ ಆತ್ಮಸಾಕ್ಷಿಯನ್ನು ಎಚ್ಚರಿಸುವ ಮಹತ್ವದ ದಿನವಾಗಿದೆ. 1948ರ ಇದೇ ದಿನ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹತ್ಯೆಗೀಡಾಗಿ ದೇಹತ್ಯಾಗ ಮಾಡಿದರೂ, ಅವರ ಸತ್ಯ ಮತ್ತು ಅಹಿಂಸೆಯ ತತ್ವಗಳು ಇಂದಿಗೂ ಭಾರತದ ಹೃದಯದಲ್ಲಿ ಜೀವಂತವಾಗಿವೆ.

2 ಅಕ್ಟೋಬರ್ 1869ರಂದು ಸರಳ ಕುಟುಂಬದಲ್ಲಿ ಜನಿಸಿದ ಗಾಂಧೀಜಿ, ಸರಳತೆಯಲ್ಲೇ ಮಹಾತ್ಮನಾಗಿ ಬೆಳೆದವರು. ಸತ್ಯ, ಅಹಿಂಸೆ, ತ್ಯಾಗ ಮತ್ತು ಸೇವಾಭಾವನೆಗಳನ್ನು ತಮ್ಮ ಜೀವನದ ಉಸಿರಾಗಿಸಿಕೊಂಡು ಅವರು ನಡೆದು ಬಂದರು.

ದಕ್ಷಿಣ ಆಫ್ರಿಕಾದಲ್ಲಿ ಅನುಭವಿಸಿದ ಅನ್ಯಾಯವೇ ಗಾಂಧೀಜಿಯೊಳಗೆ ಸತ್ಯಾಗ್ರಹ ಎಂಬ ಶಕ್ತಿಶಾಲಿ ಚಿಂತನೆಗೆ ಜನ್ಮ ನೀಡಿತು. ಅದನ್ನೇ ಅವರು ಭಾರತದ ಸ್ವಾತಂತ್ರ್ಯ ಹೋರಾಟದ ನೈತಿಕ ಅಸ್ತ್ರವನ್ನಾಗಿ ರೂಪಿಸಿದರು. ಉಪ್ಪಿನ ಸತ್ಯಾಗ್ರಹ, ಅಸಹಕಾರ ಚಳವಳಿ ಹಾಗೂ ಸಾಮೂಹಿಕ ಹೋರಾಟಗಳ ಮೂಲಕ ಶಸ್ತ್ರಾಸ್ತ್ರಗಳಿಲ್ಲದೇ ಸಾಮ್ರಾಜ್ಯವೊಂದನ್ನು ನಡುಗಿಸಿದ ಮಹಾನ್ ನಾಯಕರು ಅವರು. ಆನೈತಿಕ ಬಲವೇ ಅತಿದೊಡ್ಡ



ಶಕ್ತಿಟಿಎಂಬ ಸಂದೇಶವನ್ನು ಗಾಂಧೀಜಿ ಜಗತ್ತಿಗೆ ಸಾರಿದರು.

ಧರ್ಮ, ಜಾತಿ, ಭಾಷೆಗಳ ಭೇದವಿಲ್ಲದೇ ಮಾನವೀಯತೆಯನ್ನು ಮೊದಲ ಸ್ಥಾನದಲ್ಲಿಟ್ಟ ಗಾಂಧೀಜಿ ಸಹಿಷ್ಣುತೆ ಮತ್ತು ಸಹಬಾಳ್ವೆಯ ಪ್ರತೀಕವಾಗಿದ್ದರು. ಔಹೇ ರಾಮ್‌ಟಿಎಂಬ ಪ್ರಾರ್ಥನೆಯೊಂದಿಗೆ ಅವರು ಶಹೀದರಾದ ಕ್ಷಣ ನೋವಿನದಾಗಿದ್ದರೂ,ಅವರ ಶಹೀದತ್ವ ಅಮರತ್ವವಾಗಿದೆ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಮೌಲ್ಯಗಳ ಕುಸಿತ ಮತ್ತು ಹಿಂಸೆ ಹೆಚ್ಚುತ್ತಿರುವ ಸಂದರ್ಭದಲ್ಲಿ ಗಾಂಧೀಜಿಯ ಸತ್ಯ ಮತ್ತು ಅಹಿಂಸೆಯ ತತ್ವಗಳು ಇನ್ನಷ್ಟು ಪ್ರಸ್ತುತವಾಗಿವೆ.

ಶಹೀದರ ದಿನವು ಕೇವಲ ಪುಷ್ಪಾರ್ಪಣೆ ಮಾಡುವ ದಿನವಲ್ಲ. ಗಾಂಧೀಜಿಯ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಸಂಕಲ್ಪ ಮಾಡುವ ದಿನ. ಸತ್ಯ ಮತ್ತು ಅಹಿಂಸೆಯ ದಾರಿಯಲ್ಲಿ ನಡೆಯುವುದೇ ಮಹಾತ್ಮ ಗಾಂಧೀಜಿಗೆ ಸಲ್ಲಿಸುವ ನಿಜವಾದ ಗೌರವ.

# ಇತಿಹಾಸದಲ್ಲಿ ಈ ದಿನ

## ಜನವರಿ-30

**1948:** ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ನವದೆಹಲಿಯಲ್ಲಿ ಹತ್ಯೆಗೀಡಾದರು. ಈ ದಿನವನ್ನು ಶಹೀದ್ ದಿನವಾಗಿ ಆಚರಿಸಲಾಗುತ್ತದೆ.

**1969:** ಲಂಡನ್‌ನಲ್ಲಿ ಪ್ರಸಿದ್ಧ ರಾಕ್ ಬ್ಯಾಂಡ್ ದಿ ಬೀಟಲ್ಸ್ ಕೊನೆಯ ಸಾರ್ವಜನಿಕ ಸಂಗೀತ ಪ್ರದರ್ಶನ ನೀಡಿತು.

**1945:** ಎರಡನೇ ವಿಶ್ವಯುದ್ಧದ ಸಂದರ್ಭದಲ್ಲಿ ಜರ್ಮನಿಯ ಸಮುದ್ರ ದಾಳಿಯಲ್ಲಿ ವಿಲ್ಹೆಮ್ ಗುಸ್ಲೋಫ್ ಹಡಗು ಮುಳುಗಿದ್ದು, ಸಾವಿರಾರು ಮಂದಿ ಪ್ರಾಣ ಕಳೆದುಕೊಂಡರು.

ಜನನ

**1937:** ವನೇಸಾ ರೆಡ್‌ಗ್ರೇವ್, ಬ್ರಿಟಿಷ್ ನಟಿ

# ಕಾಲಭೈರವೇಶ್ವರ, ಲಕ್ಷ್ಮೀ ದೇಗುಲ ಪ್ರಾರಂಭೋತ್ಸವ

ಸಕಲೇಶಪುರ: ತಾಲ್ಲೂಕಿನ ಕುದುರಂಗಿ, ಸುಳ್ಳಕ್ಕಿ ಗ್ರಾಮದಲ್ಲಿ ಜ. 30 ರಂದು ಶ್ರೀ ಕಾಲಭೈರವೇಶ್ವರ ಸ್ವಾಮಿ, ಶ್ರೀ ಲಕ್ಷ್ಮೀ ದೇವಿಯವರ ನೂತನ ದೇವಸ್ಥಾನ ಪ್ರಾರಂಭೋತ್ಸವ ನೆರವೇರಲಿದೆ.

ಗುರುವಾರ ಬೆಳಿಗ್ಗೆ 5 ಗಂಟೆಗೆ ಗಂಗಾ ಪೂಜೆ, ದೇವಾಲಯ ಪ್ರವೇಶ, ದಿಕ್ಬಲಿ ಪೂಜೆ, ರಾತ್ರಿ 8 ಗಂಟೆಗೆ ಪುಣ್ಯ ವಾಸ್ತುಕಳಸ, ವಾಸ್ತು ಬಲಿ ಹೋಮ ನಡೆಯಲಿದೆ. ಜ. 30ರ ಶುಕ್ರವಾರ ಶ್ರೀ ಸ್ವಾಮಿ ಹಾಗೂ ಅಮ್ಮನವರ ಪ್ರಾಣ ಪ್ರತಿಷ್ಠಾಪನೆಯೊಂದಿಗೆ ದೇವಾಲಯ ಪ್ರವೇಶ, ಗೋಪುರ ಕಳಸ ಪ್ರತಿಷ್ಠಾಪನೆ, ಅಭಿಷೇಕ, ಅಷ್ಟೋತ್ತರ, ಪೂರ್ಣಾಹುತಿ, ನೈವೇದ್ಯ ಬಳಿಕ ಅನ್ನ ಸಂತರ್ಪಣೆ ನೆರವೇರಲಿದೆ.

## ಫೆ.1ಕ್ಕೆ ಪದ್ಮಗಂಧಿ ಸಿನಿಮಾ ಪ್ರದರ್ಶನ-ಸಂವಾದ

ಹಾಸನ: ಖ್ಯಾತ ಚಲನಚಿತ್ರ ನಟ, ನಿರ್ದೇಶಕ ಸುಚೇಂದ್ರ ಪ್ರಸಾದ್ ನಿರ್ದೇಶನದ ಪದ್ಮಗಂಧಿ ಸಿನಿಮಾ ಪ್ರದರ್ಶನ ಹಾಗೂ ಸಂವಾದ ಕಾರ್ಯಕ್ರಮವನ್ನು ನಗರದ ಎಸ್‌ಬಿಜಿ ಚಿತ್ರ ಮಂದಿರದಲ್ಲಿ ಫೆ. 1ರ ಭಾನುವಾರ ಬೆಳಿಗ್ಗೆ 9.30ಕ್ಕೆ ಏರ್ಪಡಿಸಲಾಗಿದೆ. ಸಂಸ್ಕೃತ ಭಾಷೆಯನ್ನು ಆದ್ಯತೆಯಾಗಿ ರಚನೆಯಾಗಿರುವ ಚಿತ್ರ ಇದಾಗಿದೆ. ವಿಧಾನ ಪರಿಷತ್ ಮಾಜಿ ಸದಸ್ಯೆ ಪ್ರೊ. ಎಸ್.ಆರ್. ಲೀಲಾ ಅವರ ಕಥೆ ಆಧಾರಿತ ಸಿನಿಮಾ ಪದ್ಮಗಂಧಿ. ಆಸಕ್ತರು ಟಿಕೆಟ್‌ಗಾಗಿ ಮೊ.ನಂ. 9141335473 ಇಲ್ಲಿಗೆ ಸಂಪರ್ಕಿಸಬಹುದು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248